# ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಹಿಂದಿನ ಹೆಸರು ಕರ್ನಾಟಕ ಭೂಸೇನಾ ನಿಗಮ ನಿ.)

**"ಗ್ರಾಮೀಣಾಭಿವೃದ್ಧಿ ಭವನ", 4 & 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560 009**

ಸಂ:ಕೆಆರ್‌ಐಡಿಎಲ್/ಆಡಳಿತ/ಸಿಆರ್-2/2014-15 ದಿನಾಂಕ 25-08-2014

## ಅಧಿಕೃತ ಜ್ಞಾಪನಾ

ವಿಷಯ: ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿರುವ ಭಾರತ ಸಂವಿಧಾನದ ಅನುಚ್ಛೇದ 371(ಜೆ)ನ್ನು ಕೆಆರ್‌ಐಡಿಎಲ್ ಸಂಸ್ಥೆಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ: ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಅಧಿಸೂಚನೆ 2013ದಿನಾಂಕ 06-11-2013.

2) ಸಂ. ಕೆಆರ್‌ಐಡಿಎಲ್/ಆಡಳಿತ/ಸಿಆರ್-2/2013-14 ದಿನಾಂಕ ನ18-01-2014.

3) ಕರ್ನಾಟಕ ಸರ್ಕಾರದ ಅಧಿಸೂಚನೆ 1 & 2 ಸಂ. ಡಿಪಿಎಆರ್-43/ಹೆಚ್‌ಕೆಸಿ/2013 ದಿನಾಂಕ 29-01-2014.

4) ಅಧಿಸೂಚನೆ ಸಂ.ಗ್ರಾಅಪ/59/ಇತರೆ/2013 ದಿನಾಂಕ 17-02-2014.

5) ದಿನಾಂಕ 19-07-2014 ರಂದು ನಡೆದ 175ನೇ ಆಡಳಿತ ಮಂಡಳಿಯ ಸಭೆಯ ನಿರ್ಣಯ.

** ** ** ** **

**ಪ್ರಸ್ತಾವನೆ:**

ಕರ್ನಾಟಕ ಸಾರ್ವಜನಿಕ ಉದ್ಯೋಗ ನೇಮಕಾತಿಗಳಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಮೀಸಲಾತಿಯನ್ನು ಕಲ್ಪಿಸಿ ದಿನಾಂಕ 06-11-2013 ರಲ್ಲಿ ಉಲ್ಲೇಖ-(1)ರ ಪ್ರಕಾರ ಆದೇಶ ಹೊರಡಿಸಿದೆ. ಸದರಿ ಆದೇಶದನ್ವಯ ವೃಂದ ನಿಯಂತ್ರಣ ಪ್ರಾಧಿಕಾರವು ನಿರ್ಧಿಷ್ಟಪಡಿಸಿದ ರೀತಿಯಲ್ಲಿ ಸ್ಥಳೀಯ ವೃಂದಗಳನ್ನು ರಚಿಸಿ ಪ್ರತಿಯೊಂದು ವೃಂದಗಳಲ್ಲಿನ ಹುದ್ದೆಗಳ ಸಂಖ್ಯೆಯನ್ನು ಗುರುತಿಸತಕ್ಕದೆಂದು, ಈ ರೀತಿ ಗುರುತಿಸಲಾದ ಸ್ಥಳೀಯ ವೃಂದಗಳಲ್ಲಿನ ಹುದ್ದೆಗಳನ್ನು ಸಂಬಂಧಪಟ್ಟ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗನುಸಾರವಾಗಿ ಮುಂಬಡ್ತಿ ಅಥವಾ ನೇರ ನೇಮಕಾತಿಯಡಿ ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಡತಕ್ಕದೆಂದು ಸರ್ಕಾರದ ನಿಯಮದಲ್ಲಿ ಉಲ್ಲೇಖಿತವಿದೆ.

ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಯು ಕರ್ನಾಟಕ ಸರ್ಕಾರದ ಉದ್ಯಮವಾಗಿದ್ದು, ಇದನ್ನು ಕಂಪನಿ ಕಾಯ್ದೆಗಳ ಮೇರೆಗೆ ನಡೆಸಿಕೊಂಡು ಬರಲಾಗುತ್ತಿದೆ. ಕೆಆರ್‌ಐಡಿಎಲ್‌ನ ಮೂಲ ಉದ್ದೇಶ ಸರ್ಕಾರದ ವಿವಿಧ ಇಲಾಖೆಗಳ ಮೂಲಸೌಕರ್ಯಗಳ ಗ್ರಾಮೀಣಮಟ್ಟದಲ್ಲಿನ ಕಾಮಗಾರಿಗಳನ್ನು ನಿರ್ವಹಿಸುವಲ್ಲಿ ಸರ್ಕಾರವು ವಹಿಸುವ ಯೋಜನೆಗಳನ್ನು ಅವಲಂಬಿಸಿದೆ. ಹಾಗೂ ಆಯಾ ಜಿಲ್ಲೆಗಳಲ್ಲಿ ವಿವಿಧ ಇಲಾಖೆಗಳು ವಹಿಸುವ ಕಾಮಗಾರಿಗಳ ಯೋಜನೆಯನ್ನು ಅವಲಂಬಿಸಿರುತ್ತದೆ. ಈ ಕಾರಣಗಳಿಂದಾಗಿ ಯಾವ ಯಾವ ಜಿಲ್ಲೆಗಳಲ್ಲಿ ಹಾಗೂ

ಯಾವ ಯಾವ ವರ್ಷಗಳಲ್ಲಿ ಹೆಚ್ಚಿನ ಕಾಮಗಾರಿ ಯೋಜನೆಗಳನ್ನು ಸಂಸ್ಥೆಗೆ ವಹಿಸಲಾಗುತ್ತದೆಯೋ, ಅಂತಹ ಜಿಲ್ಲೆಗಳಲ್ಲಿನ ಆ ವರ್ಷಗಳಿಗೆ ಸಂಬಂಧಿಸಿದಂತೆ ಕಛೇರಿಗಳನ್ನು ಹಾಗೂ ಅವಶ್ಯಕ ಸಿಬ್ಬಂದಿಗೆ ಕೆಲಸ ವಹಿಸುವುದರಿಂದ, ಒಂದು ಜಿಲ್ಲೆಗೆ ಸಂಬಂಧಿಸಿದಂತೆ ನಿಖರವಾದ ಕಛೇರಿಯ ಹಾಗೂ ಆ ಕಛೇರಿಗೆ ಸಂಬಂಧಿಸಿದ ಅತ್ಯವಶ್ಯಕ ಸಿಬ್ಬಂದಿಯನ್ನು ಸ್ಥಿರೀಕರಿಸಿ ಸರ್ಕಾರದ ಇಲಾಖೆಗಳಲ್ಲಿ ಇರುವಂತೆ ಕಛೇರಿಯೊಂದನ್ನು ನಿಗದಿತ ರೂಪುರೇಷೆಗಳ ಸಿಬ್ಬಂದಿಯನ್ನು ನಿಗಧಿಪಡಿಸಲು ಸಾಧ್ಯವಿರುವುದಿಲ್ಲವೆಂದು ಉಲ್ಲೇಖ(2) ರ ಪ್ರಕಾರ ಸರ್ಕಾರಕ್ಕೆ ವರದಿ ಮಾಡಲಾಗಿರುತ್ತದೆ. ಅಲ್ಲದೆ 1996 ರಲ್ಲಿ ರಚಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಇರುವ ಹುದ್ದೆಗಳಿಗೆ ಹಾಲಿ ಕಾರ್ಯನಿರ್ವಹಣೆಯ ಕಾರ್ಯಬಾಹುಳ್ಯ ಕೆಲಸಗಳಿಗೂ ವ್ಯತ್ಯಾಸವಿರುತ್ತದೆ ಎಂದು ತಿಳಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಹಾಲಿ ಕೆಆರ್‌ಐಡಿಎಲ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಸಿಬ್ಬಂದಿಗಳ ಹುದ್ದೆಗಳನ್ನೇ ಅನುಮೋದಿತ ಹುದ್ದೆಗಳೆಂದು ಪರಿಗಣಿಸಿ, ಆ ಹುದ್ದೆಗಳಿಗನುಸಾರವಾಗಿ ಹೈದರಾಬಾದ್-ಕರ್ನಾಟಕ ಪ್ರದೇಶದ ವ್ಯಾಪ್ತಿಗೆ ಬರುವ ಬಳ್ಳಾರಿ, ಗುಲ್ಬರ್ಗಾ, ಬೀದರ್, ರಾಯಚೂರು, ಕೊಪ್ಪಳ, ಯಾದಗಿರಿ ಜಿಲ್ಲೆಗಳಲ್ಲಿ ಕೆಆರ್‌ಐಡಿಎಲ್ ಸಂಸ್ಥೆಯು ಕಾರ್ಯನಿರ್ವಹಿಸುತ್ತಿರುವ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವೃಂದಗಳ ಖಾಯಂ ಸಿಬ್ಬಂದಿಗಳ ಹುದ್ದೆಗಳನ್ನು ಅನುಮೋದಿತ ಹುದ್ದೆಗಳೆಂದು ಪರಿಗಣಿಸಿ, ಆ ಪ್ರಕಾರ ಮೀಸಲಾತಿ ಪಟ್ಟಿಯನ್ನು ತಯಾರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲಾಗಿತ್ತು. ಈ ವರದಿಯನ್ವಯ ಉಲ್ಲೇಖ (4)ರ ಪ್ರಕಾರ ಕೆಆರ್‌ಐಡಿಎಲ್ ಸಂಸ್ಥೆಯ ವೃಂದದ ಅಧಿಕಾರ ವ್ಯಾಪ್ತಿಗೊಳಗಿನ ಪ್ರತಿಯೊಂದು ವೃಂದದಲ್ಲಿನ ಹುದ್ದೆಗಳ ಸಂಖ್ಯೆಯನ್ನು ಗುರುತಿಸಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು.

ಸದರಿ ಸರ್ಕಾರದ ಉಲ್ಲೇಖ (4) ರ ಅಧಿಸೂಚನೆಯ ಬಗ್ಗೆ ಕೆಆರ್‌ಐಡಿಎಲ್ ಸಂಸ್ಥೆಯ ಹೈದರಾಬಾದ್-ಕರ್ನಾಟಕ ಭಾಗದ ಕೆಲವು ಸಿಬ್ಬಂದಿಗಳು ಆಕ್ಷೇಪಣೆಯನ್ನು ವ್ಯಕ್ತಪಡಿಸಿ ಸಂಸ್ಥೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಹುದ್ದೆಯಿಂದ ಕಾರ್ಯಪಾಲಕ ಅಭಿಯಂತರರು ಹುದ್ದೆಗೆ ಬಡ್ತಿ ನೀಡಲು 371 (ಜೆ) ನಿಯಮವನ್ನು ಅಳವಡಿಸಿಕೊಳ್ಳಲಾಗಿಲ್ಲವೆಂದು ಹಾಗೂ ಶೇ8%ರಷ್ಟು ಮೀಸಲಾತಿಯನ್ನು ಕೇವಲ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಮಾತ್ರ ಅನ್ವಯಿಸಲಾಗಿದೆ ಎಂದು, ಇದನ್ನು ಹೈದರಾಬಾದ್-ಕರ್ನಾಟಕ ಪ್ರದೇಶ ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲೆಗಳಿಗೂ ಅನ್ವಯಿಸಿಲ್ಲವೆಂದು ಈ ಬಗ್ಗೆ ಕ್ರಮ ಕೈಗೊಳ್ಳಲು ಕೋರಿದ್ದರು. ಆದರೆ ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ 06-11-2013ರಂದು ಹೊರಡಿಸಿರುವ ಅಧಿಸೂಚನೆಯನ್ವಯ ಸಂಸ್ಥೆಯಲ್ಲಿನ ಸಮೂಹ-ಎ (ಕಿರಿಯ ಶ್ರೇಣಿ) ವೃಂದದವರೆವಿಗೆ ಮಾತ್ರ ಈ ಮೀಸಲಾತಿಯನ್ನು ಕಲ್ಪಿಸುವ ಅವಕಾಶವಿದ್ದು, ಕೆಆರ್‌ಐಡಿಎಲ್‌ನ ಸಹಾಯಕ ಕಾರ್ಯಪಾಲಕ ಅಭಿಯಂತರರು ಹುದ್ದೆಯವರೆಗೆ ಮಾತ್ರ (ವೇತನ ಶ್ರೇಣಿ ರೂ.28100-) ಅನ್ವಯಿಸುತ್ತಿದ್ದು, ಅದರಂತೆ ಅಳವಡಿಸಿಕೊಳ್ಳಲಾಗಿದೆ, ಹಾಗೂ

ಸಂಸ್ಥೆಯ ಕೇಂದ್ರ ಕಛೇರಿಯ ಕೇಂದ್ರ ಸ್ಥಾನ ಬೆಂಗಳೂರಿನಲ್ಲಿ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಮಾತ್ರ ಶೇ.8% ರಷ್ಟು ಮೀಸಲಾತಿಯನ್ನು ಕಾಯ್ದಿರಿಸುವ ಅವಕಾಶ ರಾಜ್ಯಪತ್ರದ ಅಧಿಸೂಚನೆಯಲ್ಲಿ ಇರುವುದರಿಂದ, ಸದರಿ ಸಿಬ್ಬಂದಿಗಳ ಆಕ್ಷೇಪಣೆಯು ನಿಯಮಾನುಸಾರ ಕ್ರಮಬದ್ಧವಿರುವುದಿಲ್ಲ, ಕಾರಣ ಸದರಿ ವಿಷಯವನ್ನು ದಿನಾಂಕ 19-07-2014 ರಂದು ನಡೆದ 175ನೇ ಆಡಳಿತ ಮಂಡಳಿ ಸಭೆಯ ಮುಂದೆ ಪ್ರಸ್ತಾಪಿಸಲಾಗಿತ್ತು. **ಸದರಿ ವಿಷಯದ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿದ ಬಳಿಕ ಉಲ್ಲೇಖ (4) ರಲ್ಲಿನ ಅಧಿಸೂಚನೆಯಲ್ಲಿ ಸರ್ಕಾರವು ಹೊರಡಿಸಿದಂತೆ ಕೆಆರ್ಐಡಿಎಲ್ ಸಂಸ್ಥೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಹುದ್ದೆಗಳಿಗೆ ಅನುಸಾರವಾಗಿ ಅನುಮೋದಿತ ಹುದ್ದೆ ಎಂದು ಪರಿಗಣಿಸುವುದು ಹಾಗೂ ಸಂಸ್ಥೆಯ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುವ ಹುದ್ದೆಗಳಲ್ಲಿ ಶೇ8% ರಷ್ಟು ಮೀಸಲಾತಿಯನ್ನು ಗುರುತಿಸಿ ಅನುಷ್ಠಾನಗೊಳಿಸಲು ಆಡಳಿತ ಮಂಡಳಿಯು ನಿರ್ಣಯಿಸಿ ತೀರ್ಮಾನ ಕೈಗೊಂಡಂತೆ ಈ ಆದೇಶಗಳನ್ನು ಹೊರಡಿಸಲಾಗುತ್ತಿದೆ.**

## ಆದೇಶ

ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿರುವ ಭಾರತ ಸಂವಿಧಾನದ ಅನುಚ್ಛೇದ 371(ಜೆ)ನ್ನು ಕೆಆರ್ಐಡಿಎಲ್ ಸಂಸ್ಥೆಯಲ್ಲಿ ಅಳವಡಿಸಿಕೊಳ್ಳಲು ನಿರ್ಧರಿಸಿ, ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳಿಗೆ ಅನುಸಾರವಾಗಿ ಅನುಮೋದಿತ ಹುದ್ದೆ ಎಂದು ಪರಿಗಣಿಸುವುದು ಹಾಗೂ ಸಮೂಹ (ಎ) ಕಿರಿಯ ಶ್ರೇಣಿ ವೃಂದ ಎಂದರೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಹುದ್ದೆಯವರೆಗೆ ಮೀಸಲಾತಿ ಕಲ್ಪಿಸುವುದು ಮತ್ತು ಸಂಸ್ಥೆಯ ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಲ್ಲಿ ಶೇ.8% ರಷ್ಟು ಮೀಸಲಾತಿಯನ್ನು ಕಲ್ಪಿಸುವುದರೊಂದಿಗೆ ಕರ್ನಾಟಕ ರಾಜ್ಯಪತ್ರ ದಿನಾಂಕ 06-11-2013 ರಂದು ಹಾಗೂ 17-02-2014 ರಂದು ಹೊರಡಿಸಿರುವ ಅಧಿಸೂಚನೆಗಳ ಪ್ರಕಾರ ಕೆಆರ್ಐಡಿಎಲ್ ಸಂಸ್ಥೆಯಲ್ಲಿ ಭಾರತ ಸಂವಿಧಾನದ ಅನುಚ್ಛೇದ 371(ಜೆ)ನ್ನು ಅಳವಡಿಸಿಕೊಂಡು ಮೀಸಲಾತಿ ಕಲ್ಪಿಸಿ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

**(ಹೆಚ್.ಪಿ.ಪ್ರಕಾಶ್ ಭಾ.ಅ.ಸೇ.)**
**ವ್ಯವಸ್ಥಾಪಕ ನಿರ್ದೇಶಕರು**
**ಕೆಆರ್ಐಡಿಎಲ್, ಬೆಂಗಳೂರು.**

**ಗೆ,**

1. ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ, ಕೆಆರ್ಐಡಿಎಲ್.
3. ಸೂಚನಾ ಫಲಕಕ್ಕೆ/ವೆಬ್ ಸೈಟ್.